**ದಿನಾಂಕಃ 20.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರ ಶ್ರೀ. ಕೆ ಕೆ ಎಸ್ ವಕೀಲರಿಂದಃ**

ನಾನು ಮೂಲತಃ ಇಂಡುವಳ್ಳಿ ಗ್ರಾಮದವನು. 1985 ರಲ್ಲಿ ಉಳವಿ ಗ್ರಾಮಕ್ಕೆ ಬಂದು ವಾಸವಾಗಿರುತ್ತೇನೆ. ವಾದಿಯು 1960 ಕ್ಕಿಂತ ಪೂರ್ವದಿಂದಲೇ ಉಳವಿ ಗ್ರಾಮದಲ್ಲಿ ವಾಸಮಾಡಿಕೊಂಡು ಬಂದಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ವಾದಿಯವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ನಿಪಿ–13 ರಂತೆ ದಿಃ 06.01.1974 ರಲ್ಲಿ ದರಕಾಸ್ತು ಅರ್ಜಿ ಸಲ್ಲಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅರ್ಜಿ ಸಲ್ಲಿಸಿರಬಹುದು, ಆದರೆ ಅದು ವಜಾಗೊಂಡಿರುತ್ತದೆ ಎಂದು ಉತ್ತರಿಸುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಸದರಿ ಆಸ್ತಿಯು ಅರಣ್ಯ ಪ್ರದೇಶಕ್ಕೆ ಒಳಪಟ್ಟಿರುವುದರಿಂದ ಅರಣ್ಯ ಇಲಾಖೆಯವರು ವರದಿಯನ್ನು ಸಲ್ಲಿಸಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅರಣ್ಯ ಇಲಾಖೆಯವರು ಸದರಿ ಜಮೀನನ್ನು ವಾದಿಯವರಿಗೆ ಮಂಜೂರು ಮಾಡಬಹುದು ಎಂದು ವರದಿ ಸಲ್ಲಿಸಿದ ಮೇರೆಗೆ ಮಾನ್ಯ ತಹಸೀಲ್ದಾರವರು ಜಮೀನು ಮಂಜೂರು ಮಾಡಿರುತ್ತಾರೆ ಅಂದರೆ ಸುಳ್ಳು. ವಾದಿಯವರು ಅಹವಾಲು ತಃಖ್ತೆಯನ್ನು ಮಾನ್ಯ ತಹಸೀಲ್ದಾರರವರಿಗೆ ಸಲ್ಲಿಸಿರುತ್ತಾರೆ ಅಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ವಾದಿಯವರು

ಜೋಳವನ್ನು ಬೆಳೆದಿರುತ್ತಾರೆ ಅಂದರೆ ಸುಳ್ಳು. ವಾದಿಯವರು ದಾವಾ ಆಸ್ತಿಯಲ್ಲಿ ಜೋಳವನ್ನು ಬೆಳೆದು ಸ್ವಾಧೀನದಲ್ಲಿರುತ್ತಾರೆ ಅಂದರೆ ಸುಳ್ಳು. ವಾದಿಯವರು ಸಲ್ಲಿಸಿದ ಅರ್ಜಿಯ ಮೇರೆಗೆ ದರಕಾಸ್ತು ಮಂಜೂರು ಮಾಡಬಹುದು ಎಂದು ವರದಿ ಸಲ್ಲಿಸಿದ್ದರು ಅಂದರೆ ಸುಳ್ಳು. ನಿಪಿ–2 ರಿಂದ 5 ಪಹಣಿ ಪತ್ರಿಕೆಯಲ್ಲಿ ವಾದಿಯವರು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದು ನಮೂದು ಇದೆ ಅಂದರೆ ಸುಳ್ಳು. 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಅತಿಕ್ರಮಣ ಮಾಡುತ್ತಾರೆ ಎಂದು ಅವರ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಅಂದರೆ ಸುಳ್ಳು. ಅದಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ ಅಂದರೆ ಸಾಕ್ಷಿಯು ಕೊಟ್ಟಿರಬಹುದು ಎಂದು ಉತ್ತರಿಸುತ್ತಾರೆ. ಈ ಪ್ರಕರಣದಲ್ಲಿ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿನ ಸಂಗತಿಗಳು ನನಗೆ ಗೊತ್ತಿದೆ. ವಾದಿಗೆ ಎರಡು ಎಕರೆ ಜಮೀನು ಯಾವಾಗ ಮಂಜೂರು ಆಗಿದೆ ಅಂದರೆ ಸಾಕ್ಷಿಯು 10–15 ವರ್ಷಗಳ ಹಿಂದೆ ವಾದಿಯ ಮಗನಿಗೆ ಮಂಜೂರು ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ 2 ಎಕರೆ ಜಮೀನು ಎಲ್ಲಿ ಬರುತ್ತದೆ ಮತ್ತು ಚಕ್ಕುಬಂದಿ ಹೇಳಲು ಬರುತ್ತದೆ ಅಂದರೆ ಸಾಕ್ಷಿಯು ಪೂರ್ವಕ್ಕೆಃ ನಾಡಕಛೇರಿ, ಪಶ್ಚಿಮಕ್ಕೆಃ ನಾಗರಾಜರವರ ಮನೆ ಮತ್ತು ಕಾಡು, ಉತ್ತರಕ್ಕೆಃ ಕಾನಳ್ಳಿ ರಸ್ತೆ, ದಕ್ಷಿಣಕ್ಕೆಃ ಕಾಡು. ದಾವಾ ಸ್ವತ್ತಿಗೂ ಹಾಗೂ ವಾದಿಯ ಮಗನಿಗೆ ಮಂಜೂರು ಆದ ಜಮೀನಿಗೂ ಸುಮಾರು 15–20 ಮೀಟರ್ ಅಂತರ ಇದೆ. ದಾವಾ ಆಸ್ತಿಯಲ್ಲಿ ಯಾರು ಸ್ವಾಧೀನಾನುಭವದಲ್ಲಿರುತ್ತಾರೆ ಅಂದರೆ ಸಾಕ್ಷಿಯು ಅದು ಸರ್ಕಾರದ

ಜಮೀನು ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯಲ್ಲಿ ಏನು ಇದೆ ಎಂದು ನನಗೆ ಗೊತ್ತಿಲ್ಲದಿದ್ದರೂ ಗೊತ್ತಿದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾದಲ್ಲಿನ ಸಂಗತಿಗಳ ಬಗ್ಗೆ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಡಿ–1 ಈಗ ಸುಮಾರು 2 ವರ್ಷಗಳ ಹಿಂದೆ ಆಗಿರುವ ಪಹಣಿ ಪತ್ರಿಕೆ ಅಂದರೆ ನನಗೆ ಗೊತ್ತಿಲ್ಲ. ವಾದಿಯವರಿಗೆ ತೊಂದರೆ ನೀಡುವ ಉದ್ದೇಶದಿಂದ ನಿಡಿ–4 ರಲ್ಲಿ ಕಾಣುತ್ತಿರುವ ಹಾಗೆ ಶೆಡ್ ಅನ್ನು ಹಾಕಿರುತ್ತೀರಿ ಅಂದರೆ ಸರಿಯಲ್ಲ. ನಿಡಿ–5 ಊರಿನವರು ಮಾನ್ಯ ತಹಸೀಲ್ದಾರವರಿಗೆ ಸಲ್ಲಿಸಿದ ಅರ್ಜಿಯ ಪ್ರತಿಯಾಗಿರುತ್ತದೆ. ನಿಡಿ–6 ರಲ್ಲಿ ನಮೂದಿಸಿದ ಹಾಗೆ ಸ.ನಂ.48 ರಲ್ಲಿ ಮಂಜೂರಾದ ನಾಲ್ಕು ಜನರಿಗೆ ಹಾಗೂ ಉರಿನವರಿಗೆ ಗಲಾಟೆ ಆಗಿದ್ದು ಇರುತ್ತದೆ ಅಂದರೆ ಸರಿ. ಸ.ನಂ.48 ರಲ್ಲಿ ದಾವಾ ಆಸ್ತಿಯಲ್ಲಿ ಹಾಗೂ ಉಳಿದ ಸರ್ಕಾರಿ ಜಮೀನಿನಲ್ಲಿ ಅತಿಕ್ರಮಣ ಮಾಡಬಾರದು ಎಂದು ಮಾನ್ಯ ತಹಸೀಲ್ದಾರವರು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿರುತ್ತಾರೆ ಅಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ವಾದಿಯು ಜೋಳ ಬೆಳೆದಿದ್ದು, ಊರಿನ ಜನರೆಲ್ಲ ಸೇರಿ ಅತಿಕ್ರಮಿಸಿ ಅಡ್ಡಿ ಆತಂಕಪಡಿಸಿದ್ದರು ಅಂದರೆ ಸುಳ್ಳು. ಅದಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ಒಂದು ದೂರು ಸಹ ದಾಖಲಾಗಿದ್ದು ಅಂದರೆ ಸುಳ್ಳು. ಅದಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ಒಂದು ಮುಚ್ಚಳಿಕೆ ಪತ್ರವನ್ನು ಬರೆದಿರುತ್ತದೆ ಅಂದರೆ ಸುಳ್ಳು. ದಿಃ17.07.2021 ರಂದು ಕಂದಾಯ ಇಲಾಖೆಯವರು ದಾವಾ ಸ್ವತ್ತನ್ನು ಅಳತೆ

ಮಾಡಿರುತ್ತಾರೆ ಅಂದರೆ ಸಾಕ್ಷಿಯು ಅದು ಸರ್ಕಾರಿ ಜಮೀನು ಎಂದು ಉತ್ತರಿಸುತ್ತಾರೆ. ವಾದಿಯ ಮಗ ತಾಲ್ಲೂಕು ಕಛೇರಿಗೆ ದಾವಾ ಶೆಡ್ಯೂಲ್ ನಲ್ಲಿ ಅಡ್ಡಿ ಆತಂಕ ಪಡಿಸುತ್ತಿದ್ದಾರೆ ಎಂದು ಗಡಿಗಳನ್ನು ಗುರುತಿಸಿ ಕೊಡಿ ಎಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ ಅಂದರೆ ಸುಳ್ಳು. ವಾದಿಯು ದಿಃ 15.12.1998 ರಲ್ಲಿ ಸ.ನಂ.48 ರಲ್ಲಿ 4 ಎಕರೆ ಜಮೀನಿಗೆ ಸಾಗುವಳಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನಾವು ಊರಿನ ಜನರೆಲ್ಲ ಸೇರಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಅರ್ಜಿ ಸಲ್ಲಿಸಿರುತ್ತೇವೆ ಅಂದರೆ ಸರಿ. ನಂತರ ದಾವಾ ಆಸ್ತಿಯ ಪಕ್ಕದಲ್ಲಿ ಇರುವ 2 ಎಕರೆ ಜಮೀನನ್ನು ವಾದಿಯ ಮಗನಿಗೆ ಮಂಜೂರು ಮಾಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**